ಕಾಡಾನೆಗಳನ್ನು ಸೆರೆಹಿಡಿದು ಸ್ಥಳಾಂತರಿಸಲು ಕೇಂದ್ರ ಸರ್ಕಾರವು ದಿನಾಂಕ: 11–11–2011 ರಂದು ಕೆಲವು ನಿಬಂಧನೆಗಳೊಂದಿಗೆ ಅನುಮತಿ ನೀಡಿರುತ್ತದೆ. ಈ ಕ್ರಮಕ್ಕೆ ರಾಜ್ಯ ಉಚ್ಚ ನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ: 14029/2008ಕ್ಕೆ ಸಂಬಂಧಿಸಿದಂತೆ ದಿನಾಂಕ: 16–11–2011ರಲ್ಲಿ ಸದರಿ ಆನೆಗಳನ್ನು ಸ್ಥಳಾಂತರಿಸುವ ಮುನ್ನ ತಜ್ಞರು ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳ ಅಭಿಪ್ರಾಯ ಪಡೆದ ನಂತರ ಸ್ಥಳಾಂತರಿಸಲು ನಿರ್ದೇಶನ ನೀಡಿರುತ್ತದೆ. ಹಾಗೆಯೇ ನ್ಯಾಯಾಲಯವು ಕೇಂದ್ರ ಸರ್ಕಾರಕ್ಕೆ ಇದನ್ನು ಗಂಭೀರವಾಗಿ ಪರಿಗಣಿಸಲು ಹಾಗೂ ಆಫ್ರಿಕಾ ಮತ್ತು ಏಷ್ಯ ಖಂಡಗಳ ನುರಿತ ತಜ್ಞರನ್ನು ಒಳಗೊಂಡ ತಂಡದೊಂದಿಗೆ ವಿಮರ್ಶಿಸಿದ ನಂತರವೇ ಸ್ಥಳಾಂತರಿಸಲು ನಿರ್ದೇಶನ ನೀಡಿರುತ್ತದೆ. ಇದನ್ನೇ ಪುನರುಚ್ಚರಿಸಿ ಈ ಕಛೇರಿಯಿಂದ ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ ಹಾಗೂ ನಿರ್ದೇಶಕರು (ಆನೆಯೋಜನೆ), ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯ, ನವದೆಹಲಿ ಇವರಿಗೆ ದಿನಾಂಕ: 29–11–2011 ರಂದು ಸೂಕ್ತ ಕ್ರಮ ಜರುಗಿಸಲು ಕೋರಲಾಗಿತ್ತು.

ಕೇಂದ್ರ ಸರ್ಕಾರವು ಪ್ರಸ್ತಾಪಿಸಿರುವಂತೆ ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ: 24–01–2012 ರಂದು ಮಾನವ ಆನೆ ಸಂಘರ್ಷವನ್ನು ತಡೆಗಟ್ಟಲು ನುರಿತ ತಜ್ಞರನ್ನೊಳಗೊಂಡ ಕಾರ್ಯಪಡೆಯನ್ನು ರಚಿಸಿ ದಿನಾಂಕ: 15–04–2012 ರೊಳಗೆ ವರದಿ ಸಲ್ಲಿಸಲು ತಿಳಿಸಿ ತೀರ್ಪು ನೀಡಿರುತ್ತದೆ. ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಸಹಾಯಧನ

370 (844) ಶ್ರೀ ಕುಮಾರ ಸ್ವಾಮಿ ಹೆಚ್.ಕೆ. (ಸಕಲೇಶಪುರ) :– ಸಣ್ಣ ಕೈಗಾರಿಕೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ಸಹಾಯಧನ ನೀಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಕಳೆದ 4–5 ವರ್ಷಗಳಿಂದ ಸಹಾಯಧನ ನೀಡದೆ ಇರುವುದಕ್ಕೆ ಕಾರಣವೇನು; (ಮಾಹಿತಿ ನೀಡುವುದು)

ಆ) ಹಾಗಿದ್ದಲ್ಲಿ, ಸಹಾಯಧನ ನೀಡದಿರುವುದರಿಂದ ಬ್ಯಾಂಕಿನಿಂದ ಸಾಲ ಪಡೆದ ಉದ್ಯಮಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಶ್ರೀ ನರಸಿಂಹನಾಯಕ ರಾಜುಗೌಡ (ಸಣ್ಣ ಕೈಗಾರಿಕೆ ಸಚಿವರು):–

ಅ) ಹೌದು

ಸರ್ಕಾರವು ಮಂಜೂರಾದ ಸಹಾಯಧನವನ್ನು ಜೇಷ್ಠತೆ ಗನುಗುಣವಾಗಿ ಹಾಗೂ ಆಯವ್ಯಯದ ಲಭ್ಯತೆಗನುಗುಣವಾಗಿ ಹಂತ ಹಂತವಾಗಿ ಪ್ರತಿ ವರ್ಷ ಬಿಡುಗಡೆ ಮಾಡುತ್ತಿದೆ.

ಕಳೆದ 5 ವರ್ಷಗಳಿಂದ ಅಂದರೆ 2007–08 ರಿಂದ 2011–12 ರವರೆಗೆ 17.089 ಕೈಗಾರಿಕಾ ಘಟಕಗಳಿಗೆ ರೂ. 222.62 ಕೋಟಿ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ.

Yes

Subsidy is being released by the Government in a phased manner in accordance with the senority and subject to availability of the funds.

During the last five years, i.e. from 2007-08 to 2011-12, a sum of Rs. 222.62 crore has been released as subsidy to 17,089 industrial units.

ಆ) ಸಹಾಯಧನವನ್ನು ಸಹಾಯಾನುದಾನ ರೂಪದಲ್ಲಿ ಹಾಗೂ ಸರ್ಕಾರದಲ್ಲಿ ಅನುದಾನ ಲಭ್ಯತೆನುಗುಣವಾಗಿ ಬಿಡುಗಡೆ ಮಾಡುವ ಷರತ್ತುಗೊಳ್ಳಪಟ್ಟು ಮಂಜೂರಾತಿ ಮಾಡಲಾಗುತ್ತಿದೆ. ಇದರಂತೆ ಸಹಾಯಧನ ಮಂಜೂರಾದ ದಿನಾಂಕದಿಂದ ಮೂರು ನಾಲ್ಕು ವರ್ಷಗಳ ಅವಧಿಯಲ್ಲಿ ಸಹಾಯಧನವನ್ನು ಬಿಡುಗಡೆ ಮಾಡಲಾಗುತ್ತಿದೆ. ಆದ್ದರಿಂದ, ಬ್ಯಾಂಕಿನಿಂದ ಸಾಲ ಪಡೆದ ಉದ್ಯಮಿಗಳಿಗೆ ತೊಂದರೆಯಾಗುವ ವಿಷಯ ಉದ್ಭವಿಸುವುದಿಲ್ಲ.

Subsidy is being sanctioned in the form of Grant-in-aid with a condition that the same will be released subject to avaiblility of funds. Accordingly, subsidy is being released to the units over a period of three to four years from the date of sanction. Thus, the question of bank financed industries facing difficulities due to delay in release of subsidy doesn't arise.\

ಜಾನಪದ ಅಧ್ಯಯನ ಕೇಂದ್ರ

371 (200) ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) :– ಕನ್ನಡ ಮತ್ತು ಸಂಸ್ಕೃತಿ ಹಾಗೂ ಸಣ್ಣನೀರಾವರಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಶ್ರೀ ಮಲೈಮಹದೇಶ್ವರ ಬೆಟ್ಟದಲ್ಲಿ ಜಾನಪದ ಅಧ್ಯಯನ ಕೇಂದ್ರ ಸ್ಥಾಪನೆ ಮಾಡಲು ಸರ್ಕಾರ ಮಂಜೂರಾತಿ ನೀಡಲಾಗಿದೆಯೇ: ಹಾಗಿದ್ದಲ್ಲಿ, ಈ ಅಧ್ಯಯನ